ರೂಪಾಯಿ ೧೫ ರಿಂದ ೧೦೦ ರೂಪಾಯಿವರೆಗೆ ಹಣ, ಕುಡಿಯಲು ಹೆಂಡ ಸರಾಬು ಮೀನು ಮಾಂಸದ ಊಟ ಪಗೈರೆ ಕಾಲನಿಗಳಲ್ಲಿ ಕೊಡಿಸಿದ್ದಲ್ಲದೆ ದೇವರ ಪಟವನ್ನು ಅವರ ಮುಂದೆ ಇಟ್ಟು ಜನತಾ ಪಕ್ಷಕ್ಕೆ ಮತ ನೀಡುವಂತೆ ದೇವರ ಹೆಸರಿನಲ್ಲಿ ಪ್ರತಿಜ್ಞೆಯನ್ನು ಮಾಡಿಸಿದ ನಿದರ್ಶನಗಳು ಇವೆ.

ಒತ್ತಾಯದಿಂದ ಹಣ ಕೊಡಿಸಿ ಬಲಾತ್ಕಾರದಿಂದ ಮದ್ಯ ನೀಡಿ ದೇವರ ಪ್ರಮಾಣ ಮಾಡಿಸಿದ್ದರಿಂದ ಈ ಮೇಲೆ ಹೇಳಿದ ಬಡ ಹರಿಜನ-ಗಿರಿಜನರನ್ನು ಭಯ ಭೀತಿ ಹುಟ್ಟಿಸಿ ಮತ ಪಡೆದು ಮೋಸ ವಂಚನೆ ಮಾಡಿರುತ್ತಾರೆ. ಇವರಿಂದ ಈ ಹರಿಜನ-ಗಿರಿಜನರು ಇನ್ನೂ ಭಯಭೀತರಾಗಿದ್ದಾರೆ. ಇನ್ನು ಮುಂದೆ ಈ ರೀತಿಯ ವಂಚನೆ ನಡೆಯದಂತೆಯೂ, ದೇವರ ಫೋಟೋ ಎದುರು ಪ್ರಮಾಣ ಮಾಡಿ ಮತ ಕೇಳುವ ಪದ್ಧತಿ ಹೋಗುವಂತೆಯೂ, ಭಯಭೀತರಾದ ಹರಿಜನ-ಗಿರಿಜನರ ಮನದಿಂದ ಈ ತರಹದ ವಂಚನೆಯ ಪ್ರವೃತ್ತಿಯಿಂದ ಮತ ಕೇಳುವುದು ಸರಿಯಲ್ಲ. ಈ ಪದ್ಧತಿಗೆ ಹೆದರಿ ಬಡ ಹರಿಜನ-ಗಿರಿಜನರು ಮತ ನೀಡಬೇಕಾಗಿಲ್ಲ. ತಮಗೆ ಬೇಕಾದ ಪಕ್ಷಕ್ಕೆ ಮತ ನೀಡಬೇಕು ಎಂದು ವೃತ್ತ ಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ ಮತ್ತು ಟಿ. ವಿ. ಗಳಲ್ಲಿ ಜಾಹಿರಾತಾಗಿ ಆಯೋಗದಿಂದಾಗಲಿ, ಸರ್ಕಾರದಿಂದಾಗಲಿ ಕೂಡಲೇ ಪ್ರಚಾರ ಕೈಗೊಳ್ಳಬೇಕು ಎಂದು ಹರಿಜನ-ಗಿರಿಜನರ ಈ ಭೀತಿಯನ್ನು ಹೋಗಲಾಡಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅವಕ್ಕೆ ಸರಿಯಾದ ಉತ್ತರ ಕೊಡುತ್ತೇನೆ. ೧-೦೦ ಪಿ. ಎಂ.

೭. ಮಾಜಿ ಪಟೇಲರುಗಳಿಗೆ ನಿವೃತ್ತಿ ವೇತನವನ್ನು ಚೆಕ್ ಮೂಲ ಕೊಡುವ ಬಗ್ಗೆ

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದಿಂದ ನಿವೃತ್ತಿ ವೇತನ ಪಡೆಯುತ್ತಿರುವ ರಾಜ್ಯದ ಮಾಜಿ ಪಟೇಲರುಗಳು ತಮ್ಮ ವೇತನವನ್ನು ಪಡೆಯಲು ಪ್ರತಿ ತಿಂಗಳು ತಾಲ್ಲೂಕಿನ ವಿವಿಧ ಮೂಲೆಗಳಿಂದ ತಾಲ್ಲೂಕು ಕಛೇರಿಗೆ ಬಂದು ಪಡೆಯಬೇಕಾಗಿರುತ್ತದೆ. ಇದರಿಂದ ಅವರುಗಳ ವೇತನದಲ್ಲಿ ಬಹಳಷ್ಟು ಹಣ ಬಸ್ಸು ಮತ್ತು ಹೋಟೆಲುಗಳಿಗಾಗಿ ವಿಚ್ರ್ಚಾಗುತ್ತದೆ, ಇದನ್ನು ತಪ್ಪಿಸಿ ಬಡ ಪಟೇಲರುಗಳಿಗೆ ಸರ್ಕಾರ ಕೊಡುತ್ತಿರುವ ಪೂರ್ಣಹಣ ನೇರವಾಗಿ ಅವರ ಕೈ ಸೇರುವಂತೆ ಚೆಕ್ಕುಗಳ ಮೂಲಕ ಸರ್ಕಾರ ಅವರುಗಳ ವಿಳಾಸಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಈ ವಿಷಯವನ್ನು ಕಂದಾಯ ಮಂತ್ರಿಗಳಿಗೆ ತಿಳಿಸಿ, ಉತ್ತರ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

೮. ಸಂಕೇಶ್ವರ ಪಟ್ಟಣವ ಕುಡಿಯುವ ನೀರಿನ ಯೋಜನೆಯ ಮಂಜೂರಾತಿ

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸಂಕೇಶ್ವರ ಪಟ್ಟಣದ ಕುಡಿಯುವ ನೀರಿನ ಯೋಜನೆಯು ಅವಶ್ಯಕತೆ ಸರಕಾರ ಗಣನೆಗೆ ತೆಗೆದುಕೊಳ್ಳದಿರುವುದು ಸಾರ್ವಜನಿಕರಲ್ಲಿ ಆತಂಕವನ್ನುಂಟುಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಸಂಕೇಶ್ವರಕ್ಕೆ ಬಂದಾಗ ನೀರಿನ ಯೋಜನೆವಾಗಿ ಹಣವನ್ನು ಕಾಯ್ದಿರಿಸಿ ಕೂಡಲೇ ಕುಡಿಯುವ ನೀರಿನ ಯೋಜನೆಯು ಪ್ರಾರಂಭಕ್ಕಾಗಿ ಆದೇಶ ನೀಡುವುದಾಗಿ ಭರವಸೆ ನೀಡಿದ್ದು ಇಲ್ಲಿಯವರೆಗೆ ಕಾರ್ಯಗತಗೊಂಡಿಲ್ಲದಿರುವುದನ್ನು ಸಭೆಯ ಗಮನಕ್ಕೆ ತಂದು ಕರ್ಪೂರ ಹಳ್ಳದ ಕೆರೆಯ ಯೋಜನೆಯನ್ನು ತುರ್ತುಕಲಿಮಿನನ್ವಯ ಜಮೀನು ಸ್ವಾಧೀನ ಪಡಿಸಿಕೊಂಡು ಕಾರ್ಯಾಚರಣೆ ಪ್ರಾರಂಭಿಸುವುದಕ್ಕೆ ಸರ್ಕಾರಕ್ಕಿರುವ ತೊಂದರೆ ಏನು ಹಾಗೂ ಈ ಯೋಜನೆಯ ಮಂಜೂರಾತಿಗಾಗಿಮಂತ್ರಿ ಮಂಡಲ ತೆಗೆದುಕೊಂಡು ನಿರ್ಣಯವೇನೆಂಬುದನ್ನು ಸದನಕ್ಕೆ ವರದಿ ಕೊಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇದರ ಬಗ್ಗೆ ವಿವರ ತರಿಸಿಕೊಂಡು ನಾನೇ ಉತ್ತರ ಕೊಡುತ್ತೇನೆ.

೯. ತಮಿಳುನಾಡಿಗೆ ಕಾವೇರಿ ನೀರನ್ನು ಒದಗಿಸುವುದರ ಬಗ್ಗೆ

ಶ್ರೀ ಕೆ. ಬಿ. ಮಲ್ಲಪ್ಪ ಮತ್ತು ಎನ್. ಗಂಗಾಧರ್.—ಮಾನ್ಯ ಅಧ್ಯಕ್ಷರೇ, ತಮಿಳುನಾಡು ಸರ್ಕಾರಕ್ಕೆ ಕರ್ನಾಟಕ ಸರ್ಕಾರದವರು ಕಾವೇರಿ ನೀರನ್ನು ಒದಗಿಸುತ್ತೇವೆಂದು ಕೊಟ್ಟ ಆಶ್ವಾಸನೆ ಬಗ್ಗೆ